ಇ) ಕರ್ನಾಟಕದ ಕರಾವಳಿ ತಟದ ಪ್ರದೇಶದಲ್ಲಿ ಐದು ಕರಾವಳಿ ಕಾವಲು ಪೊಲೀಸ್ ಠಾಣೆಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗಿದೆ

1467 (1681) ಶ್ರೀ ಲಾಲಾಜಿ ಆರ್ ಮೆಂಡನ್ (ಕಾಪು) – ಮಾನ್ಯ ಯುವಜನಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೆಜಮಾಡಿಯಲ್ಲಿ ಸರ್ಕಾರದ ರಾಜೀವ ಗಾಂಧಿ ಕ್ರೀಡಾಂಗಣ ಇರುವ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇದೆಯೇ,

ಆ) ಹಾಗಿದ್ದಲ್ಲಿ, ಇದರ ನಿರ್ವಹಣೆಯನ್ನು ಸ್ಥಳೀಯ ಗ್ರಾಮ ಪಂಚಾಯಿತಿಗೆ ನೀಡಬಹುದೇ,

ಇ) ಸರ್ಕಾರ ಇದರ ರಚನೆಗೆ ವ್ಯಯ ಮಾಡಿರುವ ಹಣವೆಷ್ಟು?

ಶ್ರೀ ಹನುಮಂತಪ್ಪ ವೈ ಆಲ್ಕೋಡ್ (ಯುವಜನಸೇವಾ ಹಾಗೂ ಕ್ರೀಡಾ ಸಚಿವರು)

ಅ) ಇದೆ

ಆ) ಜಿಲ್ಲಾ ಪಂಚಾಯತಿ ಮೂಲಕ ಸದರಿ ಕ್ರೀಡಾಂಗಣದ ನಿರ್ವಹಣೆಯನ್ನು ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು

ಇ) ಈ ಯೋಜನೆಗೆ ಸರ್ಕಾರವು ಅನುದಾನವನ್ನು ನೀಡಿರುವುದಿಲ್ಲ

1468 (2214) ಶ್ರೀ ಲಾಲಾಜಿ ಆರ್ ಮೆಂಡನ್ (ಕಾಪು) – ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಾಗಾರ್ಜುನ ಉಷ್ಣಸ್ಥಾವರ ಸ್ಥಾಪಿಸಲು ಅನುಮತಿ ನೀಡಿದ ವರ್ಷ ಯಾವುದು,

ಆ) ಈ ಸ್ಥಾವರಕ್ಕೆ ನೀಡಿದ ಸರ್ಕಾರಿ ಜಮೀನು ಎಷ್ಟು,

ಇ) ನಾಗಾರ್ಜುನ ಕಂಪನಿಯೊಂದಿಗೆ ಲ್ಯಾಂಕೋ ಕಂಪನಿ ಸೇರ್ಪಡೆಯಾದುದು ಯಾವಾಗ, ಸೇರ್ಪಡೆಗೆ ಅನುಮತಿ ನೀಡಿದ ಪ್ರಾಧಿಕಾರ ಯಾವುದು,

ಈ) ನಾಗಾರ್ಜುನ ಉಷ್ಣಸ್ಥಾವರ ಪ್ರಾರಂಭಿಸಲು ಸ್ಥಳೀಯರ ತೀವ್ರ ವಿರೋಧವಿದ್ದರೂ ಉಷ್ಣಸ್ಥಾವರ ಸ್ಥಾಪನೆಗೆ ಸರ್ಕಾರದ ಒತ್ತಾಯದಿಂದ ಸ್ಥಾವರ ಪ್ರಾರಂಭಿಸಲು ಕಾರಣಗಳೇನು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) 1994 ರಲ್ಲಿ ಉಷ್ಣ ಸ್ಥಾವರ ಸ್ಥಾಪಿಸಲು ಅನುಮತಿ ನೀಡಲಾಯಿತು

ಆ) ನಾಗಾರ್ಜುನ ವಿದ್ಯುತ್ ಯೋಜನೆಗೆ ಸರ್ಕಾರಿ ಜಮೀನು 69 ಎಕರೆ ನೀಡಿದೆ

ಇ) ಮೆ॥ ಲ್ಯಾನ್ಕೊ ಕಂಪನಿಯವರು ಮೆ॥ ನಾಗಾರ್ಜುನ ವಿದ್ಯುತ್ ನಿಗಮ ನಿಯಮಿತದ ಜೊತೆ ಬಂಡವಾಳ ಹೂಡುತ್ತಿದ್ದಾರೆ ಮೆ॥ ನಾಗಾರ್ಜುನ ವಿದ್ಯುತ್ ನಿಗಮ ನಿಯಮಿತ ಇವರ ಹೇಳಿಕೆ ಪ್ರಕಾರ ಲ್ಯಾಂಕೊ ಕಂಪನಿ ಜೊತೆ 29–05–2006 ರಂದು ಶೇರ್ ಹೊಲ್ಡರ್ ಒಪ್ಪಂದಕ್ಕೆ ಬರಲಾಗಿದೆ ಕಂಪನಿ ಕಾಯಿದೆ 1956 ರ ಪ್ರಕಾರ ಇದಕ್ಕೆ ಸಂಬಂಧಿಸಿದ ದಾಖಲೆ ಪತ್ರಗಳನ್ನು ಶೇರ್ ಹೋಲ್ಡಿಂಗ್ ಪ್ಯಾಟ್ರನ್ ಪ್ರಕಾರ ರಿಜಿಸ್ಟ್ರಾರ್ ಆಫ್ ಕಂಪನೀಸ್ ರವರಿಗೆ ಸಲ್ಲಿಸಿದ್ದಾರೆ ಕರ್ನಾಟಕ ಸರ್ಕಾರದಿಂದ ಯಾವುದೇ ಅನುಮತಿ ಅವಶ್ಯಕತೆ ಇರುವುದಿಲ್ಲ

ಈ) ರಾಜ್ಯ ಅತಿಯಾದ ವಿದ್ಯುತ್ ಕೊರತೆಯನ್ನು ಅನುಭವಿಸುತ್ತಿದೆ ಈ ಯೋಜನೆ ಕಾರ್ಯರೂಪಕ್ಕೆ ಬಂದರೆ ಕೊರತೆಯು ಕಡಿಮೆಯಾಗಬಹುದು ಕಡಲತೀರದ ವಿದ್ಯುತ್ ಯೋಜನೆಗಳು ಆಮದು ಮಾಡಿಕೊಂಡ ಕಲ್ಲಿದ್ದಲನ್ನು ಇಂಧನವಾಗಿ ಉಪಯೋಗಿಸಬಹುದಾಗಿದೆ ಆದ್ದರಿಂದ ಯೋಜನೆಯನ್ನು ಕಾರ್ಯಗತಗೊಳಿಸಲು ಸರ್ಕಾರ ಬೆಂಬಲಿಸುತ್ತದೆ

1469 (1685) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ)

ಮಾನ್ಯ ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ